Regd No. M 1299 SATYAVADI Founded1917

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 31 ಸಂಚಿಕೆ 49] ಶನಿವಾರ 29—11—47 [ಬಿಡಿ ಪ್ರತಿ 3 ಪೈ

ಪಂಜಾಬು ನಿರಾಶ್ರಿತರ ಗೋಳಿನ ಪಯಣದ ಕಥೆ

ಇದನ್ನು ನೋಡುವಾಗ ದಾಂತೆಯು ನರಕ ದೃಶ್ಯಗಳು ನೆನಪಾಗುತ್ತವೆ. ಒಮ್ಮೆ ಅದನ್ನು ನೋಡಿದರೆಂದರೆ ಸಂತರ ಯಾವಾಗಲೂ ಅದನ್ನು ಮರೆಯಲಾರರಿ. ಹೌದು ! ಪ್ರತ್ಯಕ್ಷ ನರಕವೇ ಅದು ಆ ನಿರಾಶ್ರಿತರ ಪಾಡು. ಅದೊಂದು ನಿರಾಶ್ರಿತರ ತಂಡದ ಪಯಣದ ಕರ್ಣಕಠೋರ ತರದಿಯನ್ನು 'ಹಿಂದೂಸ್ತಾನ್ ಟೈಮ್ಸ್' ಪತ್ರಿಕೆ ಈ ಕೆಳಗಿನಂತೆ ವಿವರಿಸಿದೆ —

ಒಂದು ನಿರಾಶ್ರಿತರ ತಂಡದಲ್ಲಿ ಕಡಮೆ ಯೆಂದರೆ 50 ಸಾವಿರ ಜನರಿರುತ್ತಾರೆ ಹೆಚ್ಚಾಗಿ 1 ಲಕ್ಷ ಇಲ್ಲವೇ ಅದಕ್ಕೆ ಮೇಲ್ಪಟ್ಟು ನಿರಾಶ್ರಿತರು ಒಂದೊಂದು ತಂಡದಲ್ಲಿರುತ್ತಾರೆ ದೂರದಿಂದ ನೋಡುವವರಿಗೆ ಅದು ಮುಸ್ಲಿಮರ ತಂಡವೋ ಇಲ್ಲವೆ ಮುಸ್ಲಿಮೇತರ ತಂಡವೊ ಎಂದು ಕಂಡುಹಿಡಿಯಲು ಸಾಧ್ಯವಾಗುವುದಿಲ್ಲ. ಅವು ಹೋಗುವ ದಾರಿಯನ್ನು ಎಂದರೆ ಯಾವ ಕಡೆಗೆ ಮುಂದುವರಿಯುತ್ತವೆ ಎಂಬುದನ್ನು ಪರೀಕ್ಷಿಸಿಯೇ ತಿಳಿದುಕೊಳ್ಳಬೇಕಾಗುತ್ತದೆ.

ಆ ಸಾಲಿನ ಮುಂದುಗಡೆಯಲ್ಲಿ ಎತ್ತಿನ ಗಾಡಿಗಳು. ಅವುಗಳಲ್ಲಿ ಇಡೀ ಕುಟುಂಬಗಳು, ಮನೆಮಾರು ಸಹಿತ. ಅಲ್ಲಲ್ಲಿ ಕುದುರೆಗಳು, ಕತ್ತೆಗಳು, ಒಂಟೆಗಳ ಮೇಲೆ ಸರಕುಗಳನ್ನು ಹೇರಿ ಪ್ರಯಾಣ ಮಾಡುವ ಕೆಲವರು. ಹಿಂದಿಗಡೆಯಲ್ಲಿ ಕಾಲ್ನಡಿಗೆಯಲ್ಲಿ ಬರುವ ಪಾದಚಾರಿಗಳ ತಂಡ. ಆ ಸಾಲಿನಲ್ಲೇ ಅನೇಕ ದನಕರುಗಳು ಮತ್ತು ಜಾನುವಾರುಗಳೂ ಇವೆ. ಈ ತಂಡ ಮುಂದುವರಿಯುವಾಗ ಮೇಲಕ್ಕೇಳುವ ಧೂಳಿನ ರಾಶಿ ಜಮ್ಮೆ ಮೈ ಸೂರ್ಯಮಂಡಲವನ್ನೇ ಕೆಲ ನಿಮಿಷ ಮುಚ್ಚುತ್ತದೆ. ಈ ನಿರಾಶ್ರಿತರ ಹಿಂದೆಯೇ ಸೊಳ್ಳೆಯ ಪರಿವಾರವೂ ಮುಂದುವರಿಯುತ್ತದೆ. ಕೊಳಕು ತಿಂಡಿ ಕೊಳಕು ವಸ್ತ್ರ. ಕೊಳಕು ಜನರನ್ನು ಮುತ್ತಿಕೊಂಡು ಜಾನುವಾರುಗಳು ನಡೆದು ನಡೆದು ಎಷ್ಟಂ ಮಟ್ಟಿಗೆ ಬಳಲುತ್ತಿವೆಯೆಂದರೆ ತನ್ನು ಬೆನ್ನಲ್ಲಿ ಕೂತು ಕೊಂಡು ಪೀಡಿಸುವ ಸೊಳ್ಳೆಗಳನ್ನು ಓಡಿಸಲು ಬಾಲ ಮೇಲಕ್ಕೆತ್ತುವಷ್ಟು ತ್ರಾಣವೂ ಅವಕ್ಕಿರುವುದಿಲ್ಲ.

ಬಹಳ ದೂರದಿಂದಲೇ ಅದೊಂದು ರೀತಿಯ ದುರ್ಗಂಧ ನಿಮ್ಮ ಮೂಗಿನ ಸೊಳ್ಳೆಗಳನ್ನು ಸೇರುವುದು. ನಿರಾಶ್ರಿತರ ತಂಡ ಹತ್ತಿರವಾದಂತೆಲ್ಲಾ ಕೆಟ್ಟ ವಾಸನೆ ಹೆಚ್ಚುವುದು. ಜೀವರು, ಮೈಯ ಕೊಳಕು, ಕೊಳೆಯುವ ಮಾನು ಇವುಗಳ ದುರ್ವಾಸನೆ ಇದು. ರಸ್ತೆಯಲ್ಲಿ ಒಂದು ನಾಯಿ ಸತ್ತುಬಿದ್ದಿದೆ ಅದನ್ನು ಮಿಲಿಟರಿಯವರು ಒಂದು ಬದಿಗೆ ಎಸೆಯುತ್ತಾರೆ, ಅಲ್ಲಿಂದ ಕೆಲವೇ ಮಾರು ದೂರದಿ ಒಂದು ಹೊಲದಲ್ಲಿ ಒಂದು ಕೋಣ ಸತ್ತುಬಿದ್ದಿದೆ. ರಣ ಹದ್ದುಗಳು ಅದನ್ನು ಮುಗಿಸುತ್ತಿವೆ ರಕ್ಕಸಕುಡಿದು, ಯಥೇಷ್ಟ ಮಾಂಸ ತಿಂದು ಸೊಕ್ಕಿ ಈ ಹಕ್ಕಿಗಳಿಗೆ ಮೈಯೆಲ್ಲಿ ಜಿಡ್ಡು ಹಿಡಿದಿದೆ, ರೆಕ್ಕೆ ಬಿಡಿಸಿ ಹಾರುವುದೇ ಬೇಡವಾಗಿದೆ ನೀವು ತೀರಾ ಸವಿಾಪಕ್ಕೆ ಬರುವ ತನಕ ಅವು ತಮ್ಮ ಕೆಲಸ ನಡೆಸಿಕೊಂಡೇ ಇರುತ್ತವೆ. ಸಿಮ್ಮನ್ನೇ ಎವೆಯಿಕ್ಕದೆ ಅವು ನೋಡುವಾಗ ಎದೆ ಕಂಪಿಸುತ್ತದೆ.

[ಮಂಗಳವಾರದ ಪತ್ರಿಕೆಯಲ್ಲಿ ಮುಂದುವರಿಯುವುದು

ಮಕ್ಕಳ ವಿನೋದಕ್ಕಾಗಿ

ಮೈಸೂರು.... ರಾಷ್ಟ್ರಧಾನಿಯ ಪೌರ ಸಭೆಯ ಆಶ್ರಯದಲ್ಲಿ, ಕೋರ್ಟುಗಳಿದರಿಗಿರುವ ಮನುವನದಲ್ಲಿ ಮಕ್ಕಳ ವಿನೋದ ಆಟಿನಾಟಗಳ ಕಾರ್ಯಕ್ರಮದ ಕರಂಭೋತ್ಸವವು ಸಚಿವ ಶ್ರೀ ಚುದ್ರಶೇಖರಯ್ಯನವರಅಧ್ಯಕ್ಷತೆಯಲ್ಲಿ ಅತ್ಯಂತ ವೈಭವವಾಗಿ ನೆರವೇರಿಸಲ್ಪಟ್ಟಿತು.

ನಾಡಹಬ್ಬ

ಮೈಸೂರು.... ಮಹಾರಾಜರ ಕಾಲೇಜು ಕರ್ನಾಟಕ ಸಂಘದವರು ನಾಡಹಬ್ಬವನ್ನು ನಡೆಸುವರು. ಮಂತ್ರಿಗಳಾದ ಶ್ರೀ ದಾಸಪ್ಪನವರು ಆರಂಭೋತ್ಸವ ನೆರವೇರಿಸವರು, ಶ್ರೀ ಚಂದ್ರಶೇಖರಯ್ಯನವರು ಅಧ್ಯಕ್ಷತೆ ವಹಿಸುವರು.

ಮನೆ ಒದಗಿಸಲು ರಷ್ಯಾ ಪದ್ಧತಿ

ಮನೆಗಳು ಸಾಲದಿರುವ ರಷ್ಯಾದಲ್ಲಿಯೂ ಕೂಡ, ಮುಖ್ಯವಾಗಿ ಮಾಸ್ಕೋನಗರದಲ್ಲಿ ಕಂಡುಬರುತ್ತದೆ. ಅದಕ್ಕಾಗಿ ಒಂದು ಬಗೆಯಲ್ಲಿ ಅದರ ತಾತ್ಕಾಲಿಕವಾಗಿ ಪರಿಹಾರವನ್ನು ಮಾಡಿರುವರು. ಮನೆಯ ವಾಸಸ್ಥಳವನ್ನು ಎಲ್ಲರಿಗೂ ಸಮವಾಗಿ ಹಂಚಿದ್ದಾರೆ ಕೆಲವರು ವಿಶಾಲ ಭವನಗಳಲ್ಲಿ ಅಲ್ಪ ಸಂಖ್ಯೆಯ ಜನರೇ ನಿವಾಸ ಮಾಡುವಿಕೆಯು ಕಾಣಬರುತ್ತದೆ. ಮತ್ತು ಕೆಲವರು ಕಾರ್ಮಿಕರು ಗುಂಪು ಕೂಡಿಕೊಂಡು ಎಲ್ಲರಿಗೂ ಒಂದೇ ಅಡಿಗೇ ಮನೆ. ಒಂದೇ ಭೋಜನಶಾಲೆಯನ್ನಾಗಿ ಮಾಡಿಕೊಂಡು ಸ್ಥಳವಲ್ಲದೆ ಇರುತ್ತಾದೆ. ಇರುವ ಸ್ಥಳವನ್ನು ಎಲ್ಲರೂ ಹಂಚಿಕೊಂಡು ಜೀವನ ಮಾಡಲು ಅನುಕೂಲವು ಈಗ ಕಲ್ಪಿಸಲ್ಪಟ್ಟಿದೆ. ರಷ್ಯಾ ಪದ್ಧತಿಯನ್ನು ದೊಡ್ಡದೊಡ್ಡ ಪಟ್ಟಣಗಳಲ್ಲಿ ಅದುಸರಿಸುವಂತೆ ಮಾಡುವುದು ಶ್ರೇಯಸ್ಕರವೆಂದು ಕೆಲವರು ಅಭಿಪ್ರಾಯ ಪಡುವರು.

ಅರಿಯೆತಕ್ಕ ವಿಷಯಗಳು

ಕ್ರಿಕೆಟ್ ನಿಯಮಗಳ ಪ್ರಕಾರ ಬ್ಯಾಟುಗಳು 38 ಇಂಚುಗಳಿಗಿಂತ ಉದ್ದವಾಗಿಯೂ ನಾಲ್ಕೂವರೆ ಅಂಗುಲಗಳಿಗಿಂತ ಅಗಲವಾಗಿಯೂ ಇರಕೂಡದು.

ಮಾನವನ ಆಸ್ಥಿಪಂಜರದಲ್ಲಿ 200 ಪ್ರತ್ಯೇಕ ಮೂಳೆಗಳಿವೆ.

ಒಂದು ಪಿಂಟು ನೀರಿನ ತೂಕ ಒಂದೂಕಾಲು ಪೌಂಡು.

ಇಂದಿನ ವರ್ತಮಾನ

ಮದರಾಸು ....ಮಕ್ಕಳನ್ನು ಕೊಂದ ಆರೋಪನೆ ಮೇಲೆ ಒಬ್ಬ ತಾಯಿಯ ದೇಲೆ ಮೊಖದ್ದಮೆ ಹೂಡಲಾಗಿದೆ

ಜಮ್ಮು .... ಕಾಶ್ಮೀರದದ ಹಳ್ಳಿಗಳನ್ನು ಸುಟ್ಟು ಲೂಟಿ ಮಾಡಲು 10 ಸಾವಿರ ನಾಗಾಲೋ ಕುದುರ ಸವಾರರು ಗುಡ್ಡಗಾಡಿನವರು ಸುಗ್ಗುತ್ತಿರುವರೆಂದು ಹೇಳಲಾಗಿದೆ.

ಮೈಸೂರಿಗಾಗಿ ಬಂದಿರುವ ಹೊರದೇಶದ 2750 ಟಿಕ್ ಲ್ಲಕ್ಕಿ ಮದರಾಸು ರೇವಿಗೆತಲಪಿದೆ

ಹೈದರಾಬಾದು....ಇಲ್ಲಿಯಮುಸ್ಲಿಂ ಕಾಲೇಜು ವಿದ್ಯಾರ್ಥಿಗಳು ಮುಷ್ಕರ ಹಿಡಿದಿದ್ದಾರೆ. ಹೈದರಾಬಾತಿನ ಸ್ವತಂತ್ರದಿಂದಿರಲು ಈ ಚಳವಳಿಯಂತೆ.

ಹರಿಜನನಿಗೆ ಕೌಗ್ಯಾ ಮಾಡದಿದ್ದಕ್ಕೆ ಕ್ಲಾರ್ಕನ ದಸ್ತಗಿರಿ

ಬೊಂಬಾಯಿ ನ 27.... ಒಬ್ಬ ಹರಿಜನನಿಗೆ ಕೌರಮಾಡಲು ನಿರಾಕರಿಸಿದ ಒಬ್ಬ ಕ್ಷೌರಿಕನನ್ನು ಪೋಲೀಸರು ದಸ್ತಗಿರಿ ಮಾಡಿ ವಿಚಾರಣೆಗೊಳಪಡಿಸಿದಾರೆ. ಅವನು ಜಾಮೀನಿನ ಮೇಲೆ ಬಿಡಲ್ಪಟ್ಟಿರುವನು.

ಅಮೇರಿಕಾದ ಸಕಲ ಬೀಡಮೆಂದೂ ತಮ್ಮ ಸ್ವಶಕ್ತಿಯಿಂದಲೇ ಪರಿಸ್ಥಿತಿಗಳನ್ನು ನಿಭಾಯಿಸೋಣವೆಂದೂ ಆಸ್ಟ್ರೇಲಿಯ ಮುಖ್ಯ ಮಂತ್ರಿ ಮಿ || ಚಿಪ್ಪಿಯವರು ನುಡಿದಿರುವರು

ಕಾಶ್ಮೀರ ಮಂತ್ರಿ ಷೇಕ್ ಅಬ್ದುಲ್ಲರವರು, ಕಾಶ್ಮೀರವು ಭಾರತಕ್ಕೆ ಸೇರಿದ್ದೆಂದೂ, ಗಲಭೆ ಪರಿಸ್ಥಿತಿಯಲ್ಲಿ ರೆರೆಂಡಂ ಸಾಧ್ಯವಿಲ್ಲವೆಂದೂ ನುಡಿದಿರುವರು

ಕಾಶ್ಮೀರ ಗಡಿಯಲ್ಲಿ ಧಾರಳಿಕಾರರ ಚಳವಳಿ ಬಲವಾಗುತ್ತಿದೆ ಎಂದು ಹೇಳಲಾಗಿದೆ

ಲಂಡನ್— ಕಾಮನ್ಸ್ ಸಭೆಯಲ್ಲಿ ಚರ್ಚಿಸಲ್ಪಡುತ್ತಿರುವ ಬ್ರಿಟಿಷ್ ಕ್ರಿಮಿನಲ್ ಜಸ್ಟಿಸು ಮಸೂದೆಯಲ್ಲಿ ಮರಣದಂಡನೆ ಸಮೂದಿಸಿಲ್ಲವೆಂದು ಹೇಳಲಾಗಿದೆ

ಡೆಲ್ಲಿಯಲ್ಲಿ ಮುಂದಿನ ತಿಂಗಳು 18 ರಲ್ಲಿ ನಡೆಯುವ ಕೈಕಾರಿಕಾ ಸಮ್ಮೇಳನದಲ್ಲಿ ಮೈಸೂರಿನ ಮಂತ್ರಿಗಳೂ ಭಾಗವಹಿಸುವರೆಂದು ತಿಳಿಯುಬಂದಿದೆ

ವುಡ್‌ಲ್ಯಾಂಡ್ಸ್

28–11–47 ರಿಂದ

ಮಾಯಾದೇವಿ

ರಮೇಶ್

ಡಬ್ಲ್ಯು. ಎಂ. ಖಾನ್

ಅನ್ವಾರ್

— ಪಾತ್ರವಹಿಸಿರುವ —

ರಾಜ

(ಅನೋಘ ಹಿಂದಿ ಚಿತ್ರ)

ಪ್ರತಿ ದಿನ 3 ಆಟಗಳು

Woodlands

Morning Shows at 10-30
From 28—11—47 For 4 days.

Atlantic Ferry

— starring —

Veleric Hobson
Michael Redgrave

Save the Cow

Edited, Printed and Publishd by M S Krishna Rao at the Satyavadi Press Chamaraja Agahar Myrsore.

At Opera
From 20–11–47

ಮೂಲಿತಿ — ಶಿವಭಾಗ್ಯಂ

ಎಸ್. ವಿ. ಸುಬ್ಬಯ್ಯ — ನಂಬಿಯಾರ್

ಪಾತ್ರವಹಿಸಿರುವ

ಕುಂಜನ್

ತಮಿಳು ಚಿತ್ರ — ಇದರ ಜೊತೆಯಲ್ಲಿ ಕೊಯಮತ್ತೂರಿನಲ್ಲಿ ಸ್ವತಂತ್ರ ದಿನಾಚರಣೆ ಮತ್ತು ಮಹಾತ್ಮಾ ಗಾಂಧಿಯ ವರಪಳನಿ ಯಾತ್ರೆ ಫಿಲಿಂ ಸಹಾ ತೋರಿಸಲಾಗುತ್ತೆ.

Morning Shows from 28-11-47

Madame Pimpernal

ಸತ್ಯವಾದಿ

ದಿನಪತ್ರಿಕೆ. ತಿಂಗಳಿಗೆ ಆರಾಣೆ

ವಾರ್ಷಿಕ ಚಂದ ಪಂಸ್ಥಳಕ್ಕೆ

ಅಂಚವೆಚ್ಚಸೇರಿ ರೂ. 9.

ಸೋವ-ವಾರಪಂಚಿಕೆ ವಾರ್ಷಿಕಚಂದಾ ಪಂಸ್ಥಳಕ್ಕೆ ಅಂಚೆವೆಚ್ಚ ಸೇರಿ 1–12–0

ಶಕ್ತಿಸುಧಾ

ಶಕ್ತಿಹೀನತೆಗೆ ಸಂಜೀವನ

ಉಡುಪುಗಳನ್ನು ಅತಿ ಚೊಕ್ಕಟವಾಗಿ ಒಗೆದು

— ಶುಭ್ರಮಾಡುವ ಸಾಧಕ —

ನೈಸೂರು ಸಾಬೂನನ್ನು ಉಪಯೋಗಿಸಿದ ಹೊರತು ಆಶ್ಚರ್ಯಕರವಾದಷ್ಟು ಮಟ್ಟಿಗೆ ಅದರಲ್ಲಿ ಅಡಗಿರುವ ನಿರ್ಮಲೀಕರಣಶಕ್ತಿಯನ್ನು ತಿಳಿಯಲಾರಿರಿ

ಈ ಸಾಬೂನನ್ನು ಇವತ್ತು ಉಪಯೋಗಿಸಿ ನೋಡಿ;
ಅದರ ಪ್ರತಿಫಲವನ್ನು ಕಂಡು ನೀವೇ ಬೆರಗಾಗುವಿರಿ.



ಮೈಸೂರು ಸಾಬೂನು

ಕೊಳಕು ಬಟ್ಟೆಗಳನ್ನು ಸ್ವಚ್ಛಗೊಳಿಸುವುದು

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು

Auction Sale

A number of Cars, Busses and Lorries in good running order will be sold in Public Auction at the Palace Garage, Mysore, on the 20 th and 21 st December 1947 between 9 A. M. and 1 P. M.

For full particulars please see Advertisement to be published on the 1 st and 12 th December 1947 in Hindu, Madras Mail, Tainadu, Daily Post, Sentinal, Times of India and Bombay Chronicle.

Superintendent
Palace Garage, Mysore.

ಶ್ರೀ 'ಓಂ' ಗುರುತಿನ

ಅರಿಸಿದ ಪರಿಶುದ್ಧ ಕೇಸರಿ

ಈ ಶ್ರೀ ಓಂ ಗುರುತಿನ ಕೇಸರಿಯು ಗ್ಯಾರಂಟಿಯಾಗಿ ಪರಿಶುದ್ಧವಾದುದು. ಸ್ಪೇನ್ ದೇಶದಲ್ಲಿಯು ಕೇಸರಿ ಗಿಡಗಳಿಂದ ಅರಿಸಲ್ಪಟ್ಟ ಹೂಗಳಿಂದ ಕಿತ್ತಲ್ಪಟ್ಟು ಅರಿಸ ತೆಗೆಯಲ್ಪಟ್ಟಿದಾಗಿದೆ. ಇದರಲ್ಲಿ ಏನೆಂದು ಆಕ್ಷೇಪಣೀಯ ಪದಾರ್ಥವೂ ಸೇರಿಲ್ಲ ಮತ್ತು ಧಾರ್ಮಿಕವಾಗಿಯೂ ಪರಿಶುದ್ಧವಾದುದು. ದೇವಾಲಯಗಳಲ್ಲಿಯೂ ದೇವತಾ ಪೂಜೆಗೂ ಮತ್ತಿತರ ಸಮಾರಂಭಗಳಲ್ಲಿಯೂ [illegible] ದ್ದಾಗಿದೆ. ಎಂದು ಶಿಫಾರಸ್ ಮಾಡಲ್ಪಟ್ಟಿದೆ

ವಲ್ಲಭದಾಸ್ ತೇಜ್‌ಪಾಲ್

(ಹಿಂಗು. ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು

SHAKTI SUDHA

A Superb TONIC